ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಷ್ಟು ಜನ ಹರಿಜನರಿಗೆ ಬ್ಯಾಕ್‌ಲಾಗ್ ಇದೆ, ಎಷ್ಟು ಜನರನ್ನು ತುಂಬಬೇಕು, ಎಷ್ಟು ಜನರನ್ನು ತುಂಬಬಾರದು ಎಂಬ ಬಗ್ಗೆ ಸ್ಟ್ಯಾಟಿಸ್ಟಿಕಲ್ ಇನ್‌ಫರ್ಮೇಷನ್ ಇಲ್ಲ. ಅವರ ಹತ್ತಿರ ಈ ವಿವರ ಇಲ್ಲ ಎಂದ ಮೇಲೆ ಈ ಇಲಾಖೆ ಏಕೆ ಇರಬೇಕು. ಈ ಇಲಾಖೆಗೆ ಹರಿಜನರ ಬಗ್ಗೆ ಒಂದಿಷ್ಟೂ ಸಂಬಂಧ ಇಲ್ಲದ ಮೇಲೆ ಈ ಇಲಾಖೆಯೇ ಏಕೆ ಆಗಬೇಕು? ಈ ಇಲಾಖೆಗೆ ಸ್ಟ್ಯಾಟಿಸ್ಟಿಕಲ್ ಇನ್‌ಫರ್ಮೇಷನ್ ಕಲೆಕ್ಟ್ ಮಾಡಿ ಭರ್ತಿ ಮಾಡುವುದಕ್ಕೆ ಪ್ರೆಶರ್ ಹಾಕುವುದಕ್ಕೆ ತಾವು ಏನಾದರೂ ಅವರಿಗೆ ಅಧಿಕಾರ ಕೊಡುತ್ತೀರಾ? ಈ ಇಲಾಖೆಗೆ ಶಕ್ತಿ ತುಂಬುತ್ತೀರಾ? ಹರಿಜನ ಗಿರಿಜನ ಬಗ್ಗೆ ಕೇಳುವುದಕ್ಕೆ ಅವರಿಗೆ ಕಾನೂನಿನ ಅವಕಾಶ ಮಾಡಿಕೊಡುತ್ತೀರಾ ಎಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ನಾನು ಹೇಳಿರತಕ್ಕ ಇಲಾಖೆಗಳು ಎಲ್ಲವೂ ಸರ್ಕಾರದ ಕಕ್ಷೆಯಲ್ಲಿರತಕ್ಕ ಇಲಾಖೆಗಳು . ಅದರಲ್ಲಿ ಈ ಸಮಾಜ ಕಲ್ಯಾಣ ಇಲಾಖೆ ಕೂಡ ಸೇರುತ್ತದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೂಡ ಅನ್ಯಾಯ ಆಗಿದೆ ಎಂಬ ಮಾತು ಬಂದರೆ, ಅದು ಹೆಚ್ಚಿನ ಗಮನ ಕೊಡುವ ಇಲಾಖೆ ಆಗುತ್ತದೆ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆ ಇಲಾಖೆಗೆ ಸಂಬಂಧಪಟ್ಟ ವಿವರಗಳನ್ನು ಕೂಡ ನಾನು ಒದಗಿಸಿಕೊಡುತ್ತೇನೆ.

ಬೆಂಗಳೂರು ಅಭಿವೃದ್ಧಿ ನಿಧಿಗೆ 100 ಕೋಟಿ ರೂಪಾಯಿಗಳ ಯೋಜನೆ

2115 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯದ ಮುಂಗಡ ಪತ್ರದಲ್ಲಿ ಬೆಂಗಳೂರು ಅಭಿವೃದ್ಧಿ ನಿಧಿ ಬಗ್ಗೆ 100 ಕೋಟಿ ಶಾಶ್ವತ ನಿಧಿಯನ್ನು ಕೂಡಿಸಿಕೊಡುವ ಬಗ್ಗೆ ಪ್ರಸ್ತಾಪಸಲಾಗಿತ್ತೆ?*

2) *ಹಾಗಿದ್ದಲ್ಲಿ, ಈವರೆವಿಗೆ ಸಂಗ್ರಹಿಸಲಾದ ನಿಧಿಯೆಷ್ಟು, ಹಾಗು ಇದನ್ನು ಯಾರಿಂದ ಸಂಗ್ರಹಿಸಲಾಗಿದೆ?*

3) *ಈ ಬಗ್ಗೆ ಸರ್ಕಾರದ ಮುಂದಿನ ಯೋಜನೆಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಹೌದು.

ಆ) ಇನ್ನೂ ನಿಧಿ ಸಂಗ್ರಹಿಸಿಲ್ಲ.

ಇ) ಈ ಸಂಬಂಧ ಈ ನಿಧಿಯನ್ನು ರಚಿಸಿದ ನಂತರ ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದ ಕೆಲವು ಯೋಜನೆಗಳಾದ ಬೆಂಗಳೂರು ನಗರ ಸಾರಿಗೆ ಯೋಜನೆ, ಬೆಂಗಳೂರು ಉಪನಗರ ವರ್ತುಲ ರೈಲ್ವೆ ಯೋಜನೆಗಳಿಗೆ ನಿಧಿಯನ್ನು ತೊಡಗಿಸ ಬಹುದಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ರಾಜ್ಯದ ಮುಂಗಡ ಪತ್ರದಲ್ಲಿ ಬೆಂಗಳೂರು ಅಭಿವೃದ್ಧಿ ನಿಧಿ ಬಗ್ಗೆ 100 ಕೋಟಿ ರೂಪಾಯಿಗಳ ಶಾಶ್ವತ ನಿಧಿಯನ್ನು ಕೂಡಿಸಿಕೊಡುವ ಬಗ್ಗೆ ಪ್ರಸ್ತಾಪಿಸಿಲಾಗಿತ್ತೇ ಎಂಬ ಪ್ರಶ್ನೆಗೆ ಹೌದು ಎಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ನೀಡಿದ್ದಾರೆ. ಹಾಗಿದ್ದಲ್ಲಿ ಈವರೆವಿಗೆ ಸಂಗ್ರಹಿಸಲಾದ ನಿಧಿಯೆಷ್ಟು ಹಾಗೂ ಇದನ್ನು ಯಾರಿಂದ ಸಂಗ್ರಹಿಸಲಾಗಿದೆ ಎಂದು ಕೇಳಿದ್ದಕ್ಕೆ ಇನ್ನೂ ನಿಧಿ ಸಂಗ್ರಹಿಸಿಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ನೀಡಿದ್ದಾರೆ. ಒಂದು ಕಾಲದಲ್ಲಿ ಸುಂದರವಾದ ನಗರ ಆಗಿದ್ದ ಬೆಂಗಳೂರು ಇವತ್ತಿನ ದಿನ ಹಾಳು ಕೊಂಪೆಯಾಗಿದೆ. ಇದು ಕೇವಲ ಅಶ್ವಾಸನೆಯಾಗಿ ಉಳಿಯಬಾರದು. ಮುಖ್ಯ ಮಂತ್ರಿಗಳು ತುಂಬಾ ಮುಂದಾಲೋಚನೆ ಮಾಡಿ ಬೆಂಗಳೂರಿನ ಅಭಿವೃದ್ಧಿ ದೃಷ್ಟಿಯಿಂದ

ಇದನ್ನು ಯೋಚನೆ ಮಾಡಿದ್ದಾರೆ. ಅದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುವಂಥಾದ್ದು ಏನೆಂದರೆ, ಯಾವಾಗ ಈ ನಿಧಿಗೆ ಹಣ ಸಂಗ್ರಹ ಮಾಡುವ ಕೆಲಸವನ್ನು ಪ್ರಾರಂಭ ಮಾಡುತ್ತೀರಾ? ಯಾರಿಂದ ಇದನ್ನು ಸಂಗ್ರಹಣೆ ಮಾಡಬೇಕು ಎಂದು ಯೋಚನೆ ಮಾಡಿದ್ದೀರಿ? ಈಗಾಗಲೇ ಏನಾದರೂ ಇದರ ಬಗ್ಗೆ ಹಣ ಸಂಗ್ರಹಣೆ ಮಾಡುವ ದೃಷ್ಟಿಯಿಂದ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ವಿಶೇಷವಾದ ಯೋಜನೆ ಅಥವಾ ಪ್ಲಾನ್ ಮಾಡಿದ್ದೀರಾ? ಅಥವಾ ಬೇರೆ ಯಾವುದಾದರೂ ಒಂದು ಸಮಿತಿ ಮಾಡಿ ಅದರ ಮೂಲಕ ಹಣ ಸಂಗ್ರಹಣೆ ಮಾಡಿ ಬೆಂಗಳೂರು ಅಭಿವೃದ್ಧಿಗೆ ಏನಾದರೂ ಕಾರ್ಯರೂಪಕ್ಕೆ ತರುವ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿದ್ದೀರಾ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರ ಕಳಕಳಿಯ ಹಿನ್ನೆಲೆಯಲ್ಲಿಯೇ ನಾವು ಇದನ್ನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿರತಕ್ಕದ್ದು. ಬೆಂಗಳೂರು ನಗರ ಸುಂದರವಾದ ನಗರವಾಗಿದ್ದು, ಈಗ ಬಹಳ ಅಡ್ಡಾದಿಡ್ಡಿಯಾಗಿ ಹೋಗುತ್ತಿದೆ. ದಾರಿ ತಪ್ಪಿ ಹೋಗುತ್ತಿದೆ. ಅದು ಬೆಳವಣಿಗೆಯ ದೃಷ್ಟಿಯಿಂದ ಹಲವಾರು ಸಮಸ್ಯೆಗಳನ್ನು ಸೃಷ್ಟಿ ಮಾಡುತ್ತಿದೆ ಎನ್ನತಕ್ಕ ದೃಷ್ಟಿಯಿಂದ ಬೆಂಗಳೂರಿನ ಅಭಿವೃದ್ಧಿಗಾಗಿ ನಿಧಿ ಮಾಡಿದ್ದೇವೆ.

ಇದರ ಬಗ್ಗೆ ಹೇಳಬೇಕೆಂದರೆ, ನಾವು ಕೇಂದ್ರಕ್ಕೆ ಪ್ಲಾನಿಂಗ್ ಕಮೀಷನ್‌ಗೆ ಒತ್ತಾಯ ಮಾಡಿದ್ದೇವೆ. ಬೆಂಗಳೂರಿನ ಅಭಿವೃದ್ಧಿ ಬಗ್ಗೆ ನಮಗೆ ಅದಷ್ಟು ಜಾಸ್ತಿ ಹಣವನ್ನು ಒದಗಿಸಿಕೊಡಿ ಎಂಬ ಬೇಡಿಕೆ ಈಗಲೂ ಕೇಂದ್ರದ ಮುಂದೆ ಇದೆ ಮತ್ತು ಯೋಜನಾ ಆಯೋಗದ ಮುಂದೆ ಕೂಡ ಇದೆ. ಮುಂದೆ ಅವರು ಏನು ಮಾಡುತ್ತಾರೆ ಎನ್ನುವ ವಿಚಾರ ಪ್ರತ್ಯೇಕ. ಈ ಮಧ್ಯೆ ಬೆಂಗಳೂರಿನ ಅಭಿವೃದ್ಧಿಗಾಗಿ 100 ಕೋಟಿ ರೂಪಾಯಿಗಳ ನಿಧಿ ಸ್ಥಾಪಿಸಬೇಕೆಂಬ ಪ್ರಸ್ತಾಪ ಮಾಡಿದ್ದೇವೆ. ಇದರಲ್ಲಿ ಬಿಎಂಆರ್‌ಡಿ ಬೇರೆ ಇದೆ. ಅದಕ್ಕೂ ಕೂಡ ಚೀಫ್ ಮಿನಿಸ್ಟರ್ ಅಧ್ಯಕ್ಷರಾಗಿದ್ದಾರೆ. ಅದರಿಂದ ಈ ಕಾರ್ಯ ಮಾಡಬೇಕೇ ಅಥವಾ ಪ್ರತ್ಯೇಕವಾಗಿ ಮಾಡಬೇಕೇ ಎಂಬ ವಿಚಾರ ಕೂಡ ಇದೆ. ಇದಕ್ಕೆ ಕ್ಯಾಬಿನೆಟ್ ಸಬ್ ಕಮಿಟಿಯ ಅವಶ್ಯಕತೆ ಇದೆ ಎಂದು ನಾನು ಭಾವಿಸಲಾರೆ. ಏಕೆಂದರೆ ಹಣ ಸಂಗ್ರಹ ಮಾಡತಕ್ಕ ವಿಚಾರ ಮಾತ್ರ ಬರುತ್ತದೆ. ಇದಕ್ಕಾಗಿ ಕಾರ್ಪೊರೇಟ್ ಬಾಡೀಸ್ ಅಥವಾ ಫ್ಯಾಕ್ಟರೀಸ್ ಹಣ ಕೊಡತಕ್ಕ ಶಕ್ತಿವಂತರು, ಆಮೇಲೆ ಕಾಂಟ್ರಿಬ್ಯೂಷನ್ ಯಾವ ರೀತಿ ತೆಗೆದುಕೊಳ್ಳಬೇಕೆಂಬ ವಿಚಾರವೂ ಸಹ ಇದೆ. ಈಗ ಬೆಂಗಳೂರಿನ ಮೇಯರ್‌ರವರು ಇದ್ದಾರೆ. ಬೆಂಗಳೂರು ನಗರದ ಬೆಳವಣಿಗೆಗೆ ಸಂಬಂಧಪಟ್ಟಂತೆ ಬೇರೆ ಯಾರಾದರೂ ಬರಬಹುದು. ಅವರನ್ನು ಇಟ್ಟುಕೊಂಡು ಒಂದು ಮೀಟಿಂಗ್ ಮಾಡತಕ್ಕ ವಿಚಾರ ಸಹ ಇದೆ. ಪ್ರಿಲಿಮಿನರಿ ಡಿಸ್ಕಷನ್ ಆಗಿದೆ. ನಮ್ಮ ನಮ್ಮ ಮಟ್ಟದಲ್ಲಿ ಈಗಾಗಲೇ ಎರಡು ಸಾರಿ ಮೂರು ಸಾರಿ ನಾವು ಮಾತನಾಡಿದ್ದೇವೆ. ಇದರಲ್ಲಿ ಹೆಚ್.ಯು.ಡಿ. ಮಿನಿಸ್ಟರ್ ಸಹ ಇದ್ದಾರೆ. ಇದರ ಬಗ್ಗೆ ನಾವು ಸಧ್ಯದಲ್ಲಿಯೇ ಒಂದು ಮೀಟಿಂಗ್ ಕರೆದು ಹಣವಂತರು ಯಾರ್ಯಾರು ಎಷ್ಟೆಷ್ಟು ವಂತಿಗೆ ಕೊಡಬೇಕಾಗುತ್ತದೆ ಎಂದು ನಿಗಧಿ ಮಾಡಬೇಕಾಗುತ್ತದೆ. ಒಂದು ಸಾರಿ ನಾನು ಇಲ್ಲಿ ಭಾಷಣ ಮಾಡುವಾಗ ಹೇಳಿದೆ. ಕೆಲವು ಕಾರ್ಪೊರೇಟ್ ಬಾಡೀಸ್ ಇಲ್ಲಿ ಬರುತ್ತಾರೆ, ಬೇಕಾದಷ್ಟು ಹಣವನ್ನು ಮಾಡುತ್ತಾರೆ ಎಂದು. ಅವರು ಮಾಡಿದ್ದಕ್ಕೆ ಏನೂ ವಿರೋಧ ಇಲ್ಲ. ಅವರೂ ಸಹ ಬೆಂಗಳೂರು ಅಭಿವೃದ್ಧಿಗೆ ಸ್ವಲ್ಪ ಹಣವನ್ನು ಕೊಟ್ಟರೆ ಬಹಳ ಒಳ್ಳೆಯದೆಂಬ ದೃಷ್ಟಿಯಿಂದ ಮಾಡಿದ್ದೇವೆ. ಇಡೀ ದೇಶದ ಜನರು ಇಲ್ಲೇ ಬಂದು ನೆಲಸುವುದನ್ನು ಕಲಿತು ಬಿಟ್ಟಿದ್ದಾರೆ. ಇದರಿಂದ ಬೆಂಗಳೂರಿಗೆ ಸಮಸ್ಯೆಗಳು ಜಾಸ್ತಿಯಾಗುತ್ತವೆ ಎನ್ನುವ ದೃಷ್ಟಿಯಿಂದ ನಾವು ಇದನ್ನು ಮಾಡಿದ್ದೇವೆ. ಸದ್ಯದಲ್ಲೇ ಮೀಟಿಂಗ್ ಕರೆದು 100 ಕೋಟಿ ಟಾರ್‌ಗೆಟ್ ಏನು

ಇಟ್ಟಿದ್ದೇವೆ ಅದನ್ನು ನಾವು ರಿಚ್ ಆಗುವುದಕ್ಕೆ ಕಾರ್ಯೋನ್ಮುಖರಾಗುತ್ತೇವೆ. ಈಗಾಗಲೇ ನಾವು ಅದರ ಬಗ್ಗೆ ಪ್ರಾರಂಭ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ಯಾವುದಕ್ಕೆ ತಾವು ಉಪಯೋಗ ಮಾಡುತ್ತೀರೆಂದು ಕೇಳಿದಾಗ, ಬೆಂಗಳೂರು ನಗರದ ಸಾರಿಗೆ ಯೋಜನೆಗೆ ಮತ್ತು ಬೆಂಗಳೂರು ಉಪನಗರ ವರ್ತುಲ ರೈಲ್ವೆ ಯೋಜನೆಗೆ ಉಪಯೋಗ ಮಾಡುವುದಕ್ಕೆ ಯೋಜನೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ತುಂಬಾ ಸಂತೋಷ, ಇದರ ಜೊತೆಗೆ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಅದಕ್ಕೆ ಆದ್ಯತೆಯನ್ನು ಕೊಡುವ ಸಂದರ್ಭದಲ್ಲಿ ಇದಕ್ಕೂ ಆದ್ಯತೆಯನ್ನು ಕೊಡುತ್ತೀರಾ? ಇದು ಮೊದಲನೆಯದು. ಎರಡನೆಯದು ಇಲ್ಲಿ ಬಂದು ಅನೇಕ ಜನ ದುಡ್ಡು ಮಾಡಿದ್ದಾರೆ ಎಂದು ಹೇಳಿದಿರಿ. ಅದೆಲ್ಲಾ ಸರಿ. ಅವರು ಕಾನೂನು ಬಾಹಿರವಾಗಿ ದುಡ್ಡು ಮಾಡದ ಹಾಗೆ ಎಚ್ಚರಿಕೆಯನ್ನು ವಹಿಸಬೇಕು. ಪ್ರಾಮಾಣಿಕವಾಗಿ ಯಾರು ಮಾಡುತ್ತಿದ್ದಾರೆ ಅಂತಹವರಿಂದ ಸಂಗ್ರಹಣೆ ಮಾಡುವ ಕೆಲಸ ಮಾಡದೆ ಇದ್ದರೆ ನೀವು ಏನು ಬೇಕಾದರೂ ಕೊಳ್ಳಿ ಹೊಡೆಯಿರಿ, ಅದನ್ನು ಸಂಗ್ರಹಣೆ ಮಾಡುತ್ತೇವೆಂದು ಹೇಳಿದರೆ ಆ ರೀತಿ ಮಾಡುವುದಕ್ಕೆ ನಾವು ಎನ್‌ಕರೇಜ್‌ಮೆಂಟ್ ಕೊಟ್ಟ ಹಾಗೆ ಆಗುತ್ತದೆ. ಆದುದರಿಂದ ಇದರ ಬಗ್ಗೆ ತಾವು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊದಲು ರಸ್ತೆಗಳಿಗೆ ಆದ್ಯತೆ ಕೊಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು : ಮೊದಲು ದುಡ್ಡು ಬರಲಿ, ಆಮೇಲೆ ನೀವು ಇದನ್ನೆಲ್ಲಾ ಹೇಳುವಿರಂತೆ.

ಶ್ರೀ ಎಸ್. ಬಂಗಾರಪ್ಪ : ರಸ್ತೆಗಳು, ಕುಡಿಯುವ ನೀರು ಹೀಗೆ ಅನೇಕ ವಿಚಾರಗಳು ಬರುತ್ತವೆ. ಅವೆಲ್ಲವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. 100 ಕೋಟಿ ಸಾಕಾಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಅಷ್ಟೊಂದು ಸಮಸ್ಯೆಗಳ ಆಗಾಧತೆ ಈಗ ಜಾಸ್ತಿಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ಬಜೆಟ್ ಆಗಿ 5 ತಿಂಗಳು ಕಳೆದಾಯಿತು. ಇದೇನಾದೂ ಕಾರ್ಯರೂಪ ಆಗದಿದ್ದರೆ ಬರೀ ಅಶ್ವಾಸನೆ ಆಗಬಹುದು. ನೀವು ಘೋಷಣೆ ಮಾಡಿದಾಗ ಅದು ಪತ್ರಿಕೆಯಲ್ಲೂ ಬಂತು. ಬೆಂಗಳೂರು ಮಹಾನಗರದ ಜನರು ಬಹಳ ನಿರೀಕ್ಷೆ ಮಾಡುತ್ತಿದ್ದಾರೆ. ಈ ನಿಧಿ ಸಂಗ್ರಹಣದ ಬಗ್ಗೆ ಖಚಿತವಾಗಿ ಯಾವ ತಿಂಗಳಿಂದ ಕಾರ್ಯಕ್ರಮರೂಪಿಸುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಏನಾದರೂ ಹೇಳಬಹುದಾ?

ಶ್ರೀ ಎಸ್. ಬಂಗಾರಪ್ಪ : ತಿಂಗಳು ತಾರೀಖಿನ್ನು ನಾನು ಹೇಳಲಾರೆ, ಈಗಾಗಲೇ ನಾವು 2-3 ರೌಂಡ್ ಮಾತುಕತೆ ಮಾಡಿದ್ದೇವೆ, ಅದರ ಬಗ್ಗೆ ಕಾರ್ಯೋನ್ಮುಖರಾಗುತ್ತೇವೆ ಎನ್ನತಕ್ಕ ಮಾತನ್ನು ಹಾನು ಹೇಳಿದ್ದೇನೆ. ಅದಷ್ಟು ಶೀಘ್ರವಾಗಿ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ ಅಧ್ಯಕ್ಷರೆ , ಬೆಂಗಳೂರು ನಗರ ಅಡ್ಡಾದಿಡ್ಡಿ ಬೆಳೆಯುತ್ತಿದೆ ಎನ್ನುವುದು ತಮಗೂ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಬೆಂಗಳೂರು ನಗರದ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಒಂದು ಸಮಗ್ರವಾದಂತಹ ಯೋಜನೆಯನ್ನು ರೂಪಿಸಲು ಸರ್ಕಾರದಲ್ಲಿ ಏನಾದರೂ ಚಿಂತನೆ ಇದೆಯೇ, ಯೋಜನೆ ಏನಾದರೂ ಮಾಡಿದ್ದೀರಾ? ಬೆಂಗಳೂರು ನಗರವನ್ನು ಅಭಿವೃದ್ಧಿ ಮಾಡುವುದರ ಬಗ್ಗೆ ಯಾವು ರೀತಿ ಅನುಕೂಲ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಿದ್ದೀರಾ? ಬೆಂಗಳೂರು ನಗರ ಸಮಗ್ರವಾಗಿ ಬೆಳೆಯುತ್ತಿದೆ, ಅಭಿವೃದ್ಧಿಯ ದೃಷ್ಟಿಯಿಂದ ಯಾವ ರೀತಿ ಅಭಿವೃದ್ಧಿ ಮಾಡಬೇಕೆಂದು ಸಮಗ್ರವಾದಂತಹ ಯೋಜನೆಯನ್ನಾದರೂ ನೀವು ನಿರ್ಧಿಷ್ಟವಾಗಿ ಕೈಗೊಂಡಿದ್ದೀರಾ? ಆ ಯೋಜನೆಗೆ ರೂಪುರೇಖೆಗಳನ್ನು ಕೊಟ್ಟಿದ್ದೀರಾ ಅಥವಾ ಏನಾದರೂ ಸೂತ್ರಗಳನ್ನು ಅಳವಡಿಸಿದ್ದೀರಾ? ಎರಡನೆಯದಾಗಿ ವರ್ತುಲ ರೈಲ್ವೆ ಬೇಕೆಂದು ನಾವು ಕೇಳಿದ್ದೇವೆ. ವರ್ತುಲ ರೈಲ್ವೆ ಬೇಕಾಗಿದ್ದರೆ, ನೀವು ಹಣ ಕೊಡುವುದಾದರೆ ನಾವು ಕೊಡುತ್ತೇವೆಂದು ಕೇಂದ್ರದವರು

ಹೇಳಿದ್ದಾರೆ. ಕೇಂದ್ರ ಸರ್ಕಾರದವರು ನೀವು ಹಣ ಕೊಟ್ಟರೆ ನಾವು ಮಾಡುತ್ತೇವೆ, ನಾವಾಗಿ ನಾವು ಮಾಡುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದ್ದರಿಂದ ಈ ಎರಡು ಪ್ರಶ್ನೆಗಳು ಬಹಳ ಮುಖ್ಯವಾದುದು. ಬೆಂಗಳೂರು ಅಭಿವೃದ್ಧಿ ಬಗ್ಗೆ ಸಮಗ್ರವಾದಂತಹ ಯೋಜನೆ ಈಗ ತಮ್ಮಲ್ಲಿದೆಯೇ? ಆ ಯೋಜನೆಯ ರೂಪರೇಷೆಗಳೇನು?

ಶ್ರೀ ಎಸ್. ಬಂಗಾರಪ್ಪ : ಅದು ಹೆಚ್.ಯು.ಡಿ.ಗೆ ಬರುತ್ತದೆ. ಹೆಚ್.ಯು.ಡಿ ಡಿಮ್ಯಾಂಡ್ ಬಂದಾಗ ತಾವು ಪ್ರಸ್ತಾಪ ಮಾಡಬಹುದು. ಬೆಂಗಳೂರು ನಗರದ ಸಮಗ್ರವಾದ ಅಭಿವೃದ್ಧಿ ಮತ್ತು ಬೆಳವಣಿಗೆ ಎಂಬ ಎರಡು ಪದಗಳನ್ನು ತಾವು ಪ್ರಯೋಗ ಮಾಡಿದ್ದೀರಿ ಅಭಿವೃದ್ಧಿ ಮತ್ತು ಬೆಳವಣಿಗೆ ಎರಡು ಪದ ಒಂದೇ. ಆದರೂ ಕೂಡ ತಾವು ಎರಡು ಪದಗಳನ್ನು ಪ್ರಯೋಗ ಮಾಡಿದ್ದೀರಿ, ಇದು ಸಂತೋಷದ ವಿಚಾರವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಅಭಿವೃದ್ಧಿ-ಬೆಳವಣಿಗೆ ಎರಡೂ ಒಂದೇನಾ ಸ್ವಾಮಿ. ಮಾನ್ಯ ಮುಖ್ಯಿ ಮಂತ್ರಿಗಳಿಗೂ -ನಮಗೂ ಈ ವಿಚಾರದಲ್ಲಿ ಸ್ವಲ್ಪ ತಕರಾರು ಬಂದಿದೆ. ಅದನ್ನು ತಾವು ಸರಿಪಡಿಸಬೇಕು. ಅಭಿವೃದ್ಧಿ ಬೇರೆ ಬೆಳವಣಿಗೆ ಬೇರೆ.

ಅಧ್ಯಕ್ಷರು : ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ ನಾನು ತಮಗೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ ; ಹೆಚ್.ಯು.ಡಿ. ಇಲಾಖೆಯ ಬೇಡಿಕೆ ಬರುತ್ತದೆ. ಅದು ಬಂದಾಗ ತಾವು ಹಲವಾರು ಸಲಹೆಗಳನ್ನು ಕೊಡಿ. ಆಗ ವರ್ತುಲ ರೈಲ್ವೆ ಸೇರಿಕೊಂಡಂತೆ ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡುತ್ತಾರೆ. ಆಗ ತಾವು ಅದನ್ನು ತುಂಬು ಹೃದಯದಿಂದ ಸ್ವಾಗತ ಮಾಡಬಹುದು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಿ ಮಂತ್ರಿಗಳು ಬೆಂಗಳೂರು ಅಭಿವೃದ್ಧಿಗಾಗಿ 100 ಕೋಟಿ ರೂಪಾಯಿಗಳನ್ನು ಸಂಗ್ರಹಣ ಮಾಡಬೇಕೆಂಬ ಯೋಜನೆ ಏನು ಹಾಕಿಕೊಂಡಿದ್ದಾರೆ. ಇದು ನಿಜವಾಗಿ ಬಹಳ ಒಳ್ಳೆಯ ಯೋಜನೆಯಾಗಿದೆ. ಇವತ್ತು ಬೆಂಗಳೂರು ನಗರ ಅಭಿವೃದ್ಧಿ ಆಗಬೇಕಾಗಿದೆ. ಫ್ಲೈಓವರ್ಸ್ ಆಗಬೇಕಾಗಿದೆ. ಬೆಂಗಳೂರು ನಗರವನ್ನು ಅಭಿವೃದ್ಧಿ ಮಾಡುವ ಜವಾಬ್ದಾರಿ ಬಿ.ಡಿ.ಎ. ಮತ್ತು ಕಾರ್ಪೊರೇಷನ್‌ರವರ ಮೇಲಿದೆ. ಆ ಎರಡೂ ಕಡೆಯೂ ಹಣವಿಲ್ಲ. ಇವತ್ತು ರಿಂಗ್ ರೋಡ್ ಕೆಲಸ ಹಾಗೆಯೇ ನಿಂತಿದೆ. ಏಕೆಂದರೆ, ಬಿ.ಡಿ.ಎ. ಹತ್ತಿರ ಹಣವಿಲ್ಲ. ನಮ್ಮ ಸರ್ಕಾರ ಇದ್ದಾಗ ಸರ್ಕಾರದ ಹಣ ಖರ್ಚು ಮಾಡದೆ ಬಹಳಷ್ಟು ಲೇಔಟ್‌ಗಳನ್ನು ಬೆಂಗಳೂರಿನಲ್ಲಿ ಮಾಡಿದ್ದೇವೆ. ಅಲ್ಲಿ ಇವತ್ತು ಪ್ಲೇಗ್ರೌಂಡ್ಸ್ ಮತ್ತು ಈ ಪಾರ್ಕ್ಸ್ ಮತ್ತು ಪ್ಲೇಗ್ರೌಂಡ್ಸ್ ಕೆಲವು ಇಂಡಸ್ಟ್ರೀಸನ್ನು ಅಡಾಪ್ಟ ಮಾಡಿ ಕೊಡಬಾರದು. ನಾವು ಕಾರ್ಯಕ್ರಮ ಹಾಕಿದ್ದೆವು. ಮತ್ತು ಪಾರ್ಕ್‌ಗಳ ಡೆವಲಪ್‌ಮೆಂಟ್ ಆಗಿಲ್ಲ. ಸರ್ಕಾರದಿಂದ ಹಣವನ್ನು ಖರ್ಚುಮಾಡದೆ ನಾವು ಪಾರ್ಕ್, ಪ್ಲೇಗ್ರೌಂಡ್‌ಗಳನ್ನು ಡೆವಲಪ್ ಮಾಡುವುದಕ್ಕೆ ಸಾಧ್ಯವಿದೆ. ಬಹಳಷ್ಟು ಜನ ಇಂಡಸ್ಟ್ರೀಯಲಿಸ್ಟ್ ಮುಂದೆ ಮಾಡಲಿಕ್ಕೆ ಸಾಧ್ಯವಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ವಿವರಗಳು ತುಂಬ ಇವೆ. ಮಾನ್ಯ ಸದಸ್ಯರು ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕು ಎನ್ನತಕ್ಕಂಥಾದ್ದೇ ಸರ್ಕಾರದ ಆಸೆ. ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಯ ಡಿಮ್ಯಾಂಡ್ ಬಂದಾಗ ಇದನ್ನು ಚರ್ಚಿಸೋಣ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಬೆಂಗಳೂರು ನಗರದ ಅಭಿವೃದ್ಧಿಯ ಬಗ್ಗೆ ಹೇಳಿದರು. ಈ ನಗರ ಈಗಾಗಲೇ ಬದುಕುವುದಕ್ಕೇ ದುಸ್ಸಾಧ್ಯವಾಗುವಂಥ ಮಟ್ಟವನ್ನು ತಲುಪಿದೆ. ನಮಗೆ ಈಗಿರುವ ಸಮಸ್ಯೆಯನ್ನು

ನಿವಾರಿಸುವುದಕ್ಕೆ we have to make Bangalore unattractive rather than making it attractive to migrants. ಈಗಿರುವ ಬೆಂಗಳೂರು ನಗರಕ್ಕೆ ಏನು ಕನಿಷ್ಟ ಸೌಲಭ್ಯವನ್ನು ಕೊಡಬೇಕೋ ಅದನ್ನು ಕೊಡುವುದಕ್ಕೆ ಸರ್ಕಾರದಿಂದ ಆಗುತ್ತಿಲ್ಲ. ಕುಡಿಯುವ ನೀರಿಗಾಗಿ ಸರ್ಕಾರದವರು ಈಗಾಗಲೇ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ. ಇನ್ನು ಬೇರೆ ಕನಿಷ್ಠ ಸೌಲಭ್ಯಗಳ ಬಗ್ಗೆ ವಿವರವಾಗಿ ಮಾತನಾಡುವುದು ಬೇಕಾಗಿಲ್ಲ. ಕರ್ನಾಟಕದಲ್ಲಿ ಬೇರೆ ಪ್ರದೇಶಗಳ ಅಭಿವೃದ್ಧಿ ಕಡೆ ತಾವು ಗಮನ ಹರಿಸಿದಿರಿ ಮೊದಲು, ಹೊರಗಡೆಯಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಬೆಂಗಳೂರಿಗೆ ವಲಸೆ ಬರುವಂಥದ್ದನ್ನು ಮೊದಲು ನಿಲ್ಲಿಸಬೇಕಾಗಿದೆ. Bangalore is enough grown. We have to stop its growth now. I have been demanding abolition of BDA here and now....

ನಾನು ಹಳ್ಳಿಯಿಂದ ಬಂದಿದ್ದು ಏನೋ ಅಕಸ್ಮಿಕವಾಗಿ, ಇಲ್ಲಿ ಸಿಕ್ಕಿಹಾಕಿಕೊಂಡು ಇಲ್ಲೇ ಬದುಕುವ ಪರಿಸ್ಥಿತಿಗೆ ಬಂದಿದ್ದೇನೆ. ಈ ನಗರದಲ್ಲಿ ನಿಜವಾಗಿಯೂ ನನಗೆ ಬದುಕಲು ಆಸೆ ಇಲ್ಲ. ಆದ್ದರಿಂದ ದಯವಿಟ್ಟು ಅದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಯವರೆ, ಅವರು ಬದುಕುವುದಕ್ಕೆ ನೀವು ತೀರ್ಮಾನ ಮಾಡಿ ಎಂದು ಹೇಳುತ್ತಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನನ್ನಂಥವರು ಎಂದು ಅಷ್ಟೇ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರೊಬ್ಬರನ್ನೇ ಎಂದಲ್ಲ, ಅವರಂತೆ ಇರುವ ಎಲ್ಲರನ್ನೂ ಬದುಕಿಸುವುದು.

ಶ್ರೀ ಎಸ್. ಬಂಗಾರಪ್ಪ : ಪ್ರೊ. ನಂಜುಂಡಸ್ವಾಮಿಯವರನ್ನು ಬದುಕಿಸುವುದು ಅಷ್ಟೊಂದು ಕಷ್ಟವೆಂದು ನಾನು ಭಾವಿಸಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಾವು ಪೆನ್ಸಿಲ್ ತೋರಿಸಿ ಹೇಳುತ್ತಿದ್ದೀರಿ. ಹಾಗಾದರೆ ಅವರ ತೂಕ ನೋಡಿ ಹೇಳುತ್ತಿದ್ದೀರಾ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನನ್ನ ಆಕಾರ ನೋಡಿ ನನ್ನ ಮೇನ್ ಟೆನೆನ್ಸ್ ಬಹಳ ಸುಲಭವೆಂದು ಹೇಳುತ್ತಿದ್ದಾರೆ. ನನ್ನ ನಿಕಟ ಸಂಪರ್ಕಕ್ಕೆ ಬಂದರೆ ಅರ್ಥವಾಗುತ್ತದೆ.

MR. SPEAKER : Appearances are deceptive.....

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ , ಮಾನ್ಯ ಸದಸ್ಯರ ಒಂದು ಅಭಿಪ್ರಾಯವನ್ನು ಒಪ್ಪುತ್ತೇನೆ. ಬೆಂಗಳೂರಿಗೆ ವಲಸೆ ಬರುವಂಥದ್ದು ತುಂಬಾ ಆಗಿದೆ. ಇದು ಇವತ್ತಲ್ಲ ಮೊದಲಿನಿಂದ ಆಗುತ್ತಿದೆ. ಭಾರತದಲ್ಲಿ ಎಲ್ಲಾ ಕಡೆ ನಗರಗಳ ಪರಿಸ್ಥಿತಿ ಮತ್ತು ಟೌನ್‌ಗಳ ಪರಿಸ್ಥಿತಿ ಇದೆ ಆಗಿದೆ. ಹಳ್ಳಿಗಳಲ್ಲಿ ಜೀವನ ಮಾಡುವುದು ಅಷ್ಟೇ ಕಷ್ಟವೆಂದು ಜನ ವಲಸೆ ಬರುತ್ತಿದ್ದಾರೆ.

Prof. M.D. NANJUNDASWAMY : That is exactly the point I am making. You have to make the village economy more attractive. ಆಗ ಮಾತ್ರ ಸಾಧ್ಯ.

ಶ್ರೀ ಎಸ್. ಬಂಗಾರಪ್ಪ : ಇದನ್ನು ಕ್ವೆಸ್ಚನ್ ಅವರ್ ನಲ್ಲಿ ಡಿಸ್ ಕಸ್ ಮಾಡಲು ಆಗುವುದಿಲ್ಲ. It is a very big subject. I do agree with you. It has to be discussed in depth.....

ಇದರ ಬಗ್ಗೆ ವಿಚಾರ ಮಾಡುವುದು ಒಳ್ಳೆಯದು. ನಮ್ಮ ರೂರಲ್ ಇಕಾನಮಿಗೆ ಹಲವಾರು ವಿಚಾರಗಳು ಸಂಬಂಧ ಬರುವಂಥದ್ದಾಗಿದ್ದು ಸಂಬಂಧಪಟ್ಟ ಇಲಾಖೆಯ ಬೇಡಿಕೆ ಚರ್ಚೆಗೆ ಬಂದಾಗ ಈ ಬಗ್ಗೆ ಚರ್ಚೆ ಮಾಡೋಣ. ಈಗ ತಕ್ಷಣ ಚರ್ಚೆ ಮಾಡಿ ಮುಗಿಸುವುದಕ್ಕಾಗುವುದಿಲ್ಲ.